ರೇಷ್ಮೆ ಬೆಳೆಗೆ ತಗಲುವ ಗಂಟು ರೋಗದಿಂದ ನಷ್ಟ

93 (560) ಶ್ರೀ ಸಿ. ಎಂ. ಲಿಂಗಪ್ಪ(ರಾಮನಗರ):- ಮಾನ್ಯ ರೇಷ್ಮೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ;

ಅ) ಸುಮಾರು ಒಂದು ವರ್ಷದಿಂದ ರೇಷ್ಮೆ ಬೆಳೆಗಾರರಿಗೆ ಕಾಡುತ್ತಿರುವ ಗಂಟು ರೋಗದಿಂದ ಬೆಳೆಗಾರರಿಗೆ ಎಷ್ಟು ಕೋಟಿ ರೂಪಾಯಿಗಳ ನಷ್ಟ ಸಂಭವಿಸಿದೆ ಎಂಬುದನ್ನು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಈ ರೋಗವನ್ನು ತಡೆಗಟ್ಟದಿದ್ದರೆ ರೇಷ್ಮೆ ಬೆಳೆ ರಾಜ್ಯದಿಂದಲೇ ಮಾಯವಾಗುವುದೆಂಬ ಸತ್ಯ ಸಂಗತಿಯನ್ನು ಸರ್ಕಾರ ಮನಗಂಡಿದೆಯೇ?

ಇ) ಈ ರೋಗವನ್ನು ನಿಯಂತ್ರಿಸಲು ಹೆಚ್ಚು ಪರಿಣಾಮಕಾರಿ ವಿಧಾನವನ್ನು ಸರ್ಕಾರ ಆಲೋಚಿಸಿದೆಯೇ?

ಈ) ಗಂಟುರೋಗದಿಂದ ಬೆಳೆ ನಷ್ಟ ಹೊಂದಿದ ರೈತರಿಗೆ ಸಹಾಯ ಧನವನ್ನು ನೀಡುವ ವಿಚಾರವನ್ನು ಸರ್ಕಾರ ಆಲೋಚಿಸುವುದೇ?

ಶ್ರೀ ವಿ. ಮುನಿಯಪ್ಪ (ರಾಜ್ಯ ರೇಷ್ಮೆ ಸಚಿವರು):-

ಅ) ಗಂಟು ರೋಗವು ಸೇರಿದಂತೆ ರೇಷ್ಮೆ ಹುಳುಗಳಿಗೆ ಬರತಕ್ಕಂಥ ಸುಣ್ಣಕಟ್ಟು, ಹಾಲು ಮತ್ತು ಸಪ್ಪೆರೋಗಗಳಿಂದ ಬೆಳೆಗಳು ಕೆಟ್ಟಿವೆ. ರೇಷ್ಮೆ ಬೆಳೆ ಕೆಡಲು ಅನೇಕ ಕಾರಣಗಳಿವೆ. 1) ವೈಜ್ಞಾನಿಕ ರೀತಿಯಲ್ಲಿ ಹುಳು ಸಾಕಣೆ ಮಾಡದೆ ಇರುವುದು. 2) ವಾತಾವರಣ ವೈಪರಿತ್ಯಗಳು 3) ರೇಷ್ಮೆ ಹುಳುಗಳಿಗೆ ಬರತಕ್ಕಂಥ ರೋಗಗಳು.

ಆ) ಗಂಟು ರೋಗದ ತೀವ್ರತೆಯನ್ನು ಸರ್ಕಾರ ಮನಗಂಡಿದೆ.

ಇ) ಹೌದು.

ಗಂಟು ರೋಗವನ್ನು ತಡೆಯಲು ಅನುಸರಿಸುತ್ತಿರುವ ಕ್ರಮಗಳನ್ನು ತೀವ್ರಗೊಳಿಸಲಾಗಿದೆ. ಈ ರೋಗವನ್ನು ಪರಿಣಾಮಕಾರಿಯಾಗಿ ನಿಯಂತ್ರಿಸಲು ಬಿತ್ತನೆ ವಲಯದಲ್ಲಿ ಹುಳು ಸಾಕಣೆ ಮನೆಗಳನ್ನು ಮತ್ತು ಉಪಕರಣಗಳನ್ನು ಪಾರ್ಮಲಿನ್ ದ್ರಾವಣ, ಬ್ಲೀಚಿಂಗ್ ಪುಡಿ ದ್ರಾವಣದಿಂದ ಪ್ರತಿ ಬೆಳೆಯ ನಂತರ ಮತ್ತು ಬೆಳೆಯ ಮುನ್ನ ಸಿಂಪಡಿಸಲಾಗುತ್ತದೆ. ಮಾರುಕಟ್ಟೆಗೆ ಬಂದಗೂಡುಗಳನ್ನು ಪರೀಕ್ಷಿಸಿ ಗಂಟು ರೋಗ ಕಣಗಳು ಕಾಣ ಬಂದರೆ ಆ ಗೂಡನ್ನು ಬಿತ್ತನೆಗೆ ಯೋಗ್ಯವಲ್ಲವೆಂದು ತೀರ್ಮಾನಿಸಲಾಗುತ್ತದೆ. ಬಿತ್ತನೆ ಗೂಡನ್ನು ಉತ್ಪನ್ನ ಮಾಡುವಾಗ ರೋಗ ಬರದಂತೆ ಮುನ್ನೆಚ್ಚರಿಕೆ ವಹಿಸಿ ಸೆಲ್ಯೂಲಾರ್ ಸಾಕಾಣಿಕೆ ಕ್ರಮವನ್ನು ಅನುಸರಿಲಾಗುತ್ತಿದೆ. ಮತ್ತು ಪ್ರತಿ ರೈತರು ಹುಳು ಸಾಕಣೆ ಕ್ರಮವನ್ನು ವೀಕ್ಷಿಸಿ ಸುಧಾರಿತ ಕ್ರಮ ಆಚರಣೆಗೆ ತರಲು ವ್ಯವಸ್ಥೆ ಮಾಡಲಾಗಿದೆ. ಮಿಶ್ರ ತಳಿ ಪ್ರದೇಶದಲ್ಲಿ ಗಂಟುರೋಗವನ್ನು ತಡೆಗಟ್ಟಲು ಪ್ರತಿ ಬೆಳೆಯಾದ ನಂತರ ಎಲ್ಲಾ ರೇಷ್ಮೆ ಬೆಳೆಗಾರರ ಮನೆಗಳನ್ನು ಮತ್ತು ಉಪಕರಣಗಳನ್ನು ಪಾರ್ಮಲಿನ್ ದ್ರಾವಣ, ಬ್ಲೀಚಿಂಗ್ ಪುಡಿ ದ್ರಾವಣದಿಂದ ಸಿಂಪರಣೆ ಮಾಡಲಾಗುತ್ತದೆ. ಬಿತ್ತನೆ ಬೆಳೆಗಾರರಿಗೆ ವಿತರಣೆ ಮಾಡಿ ಅದರ ಸಾಕಾಣಿಕೆಯಲ್ಲಿ ಯಾವುದೇ ಬಿತ್ತನೆ ಬೆಳೆಗಾರರ ಬೆಳೆಯಲ್ಲಿ ಗಂಟುರೋಗ ಕಾಣ ಬಂದರೆ ಆ ಪಂಗಡದ ಎಲ್ಲಾ ಬೆಳೆಗಳನ್ನು ಬಿತ್ತನೆಗೆ ಯೋಗ್ಯವಲ್ಲವೆಂದು ನೂಲು ಬೆಚ್ಚಾಣಿಕೆಗೆ ಕೊಡಲಾಗುತ್ತಿದೆ.

ಈ) ಅವಕಾಶವಿರುವುದಿಲ್ಲ.

ಶ್ರೀ ಸಿ. ಎಂ. ಲಿಂಗಪ್ಪ:- ಮಾನ್ಯ ಅಧ್ಯಕ್ಷರೇ, ನಾನು ಪ್ರಶ್ನೆ 560ನ್ನು ಕೇಳುತ್ತೇನೆ. ಆದರೆ ಉತ್ತರವನ್ನು ಮಾನ್ಯ ಮಂತ್ರಿಗಳು ಓದಗಿಸಿರುವುದಿಲ್ಲ.

ಶ್ರೀ ವಿ. ಮುನಿಯಪ್ಪ:- ಉತ್ತರವನ್ನು ಕಳುಹಿಸಿಕೊಡಲಾಗಿದೆ.

ಶ್ರೀ ಸಿ. ಎಂ. ಲಿಂಗಪ್ಪ:- ನನಗೆ ಉತ್ತರಗಳು ಬಂದಿಲ್ಲ.

ಅಧ್ಯಕ್ಷರು:- ಏಕೆ ಅವರಿಗೆ ಉತ್ತರಗಳು ಹೋಗಿಲ್ಲ?

ಶ್ರೀ ಜೆ.ಸಿ. ಮಾಧು ಸ್ವಾಮಿ:- ಹೋದ ಸಲ ಅಸೆಂಬ್ಲಿಯಲ್ಲಿ ನಾವು ಕೇಳಿದ ಪ್ರಶ್ನೆಗಳಿಗೆ ಇನ್ನೂ ಉತ್ತರ ಬಂದಿಲ್ಲ, ಹೀಗಾದರೆ ಹೇಗೆ?

ಅಧ್ಯಕ್ಷರು:- ಪ್ರಶ್ನೆಗಳಿಗೆ ಉತ್ತರದ ಪಟ್ಟಿಯನ್ನು ನಿಗದಿತ ಕಾಲದೊಳಗೆ ನನ್ನ ಕಛೇರಿಗೆ ಕಳುಹಿಸಿಕೊಡತಕ್ಕದ್ದನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು. ಇಲ್ಲದಿದ್ದರೆ ಅದನ್ನು ನಾವು ಬಹಳ ಗಂಭೀರವಾಗಿ ಪರಿಗಣಿಸಬೇಕಾಗುತ್ತದೆ.

ಶ್ರೀ ಸಿ. ಎಂ. ಲಿಂಗಪ್ಪ:- ಹೋದ ಸಾರಿಯೂ ಕೂಡ ಹೀಗೆಯೆ ಆಯಿತು.

ಅಧ್ಯಕ್ಷರು:- ನಿಮ್ಮ ಇಂಗಿತವನ್ನು ನಾನು ಹೇಳಿದ್ದೇನೆ. ಇದಕ್ಕೆ ಇನ್ನೂ ಸೇರಿಸುವುದಕ್ಕೆ ಏನೂ ಉಳಿದಿಲ್ಲ. ಈಗ ನಿಮ್ಮ ಉಪಪ್ರಶ್ನೆ ಕೇಳಿ.

ಶ್ರೀ ಸಿ. ಎಂ. ಲಿಂಗಪ್ಪ:- ಈಗ ತಾನೇ ಮಂತ್ರಿಗಳಿಂದ ನನಗೆ ಉತ್ತರದ ಪ್ರತಿ ಬಂದಿದೆ. ಅದನ್ನು ನಾನು ಓದಬೇಕಾಗಿರುವುದರಿಂದ ಇನ್ನೊಂದು ಪ್ರಶ್ನೆ ಚರ್ಚೆಗೆ ತೆಗೆದುಕೊಂಡು ಆನಂತರ ನನಗೆ ಈ ಪ್ರಶ್ನೆಗೆ ಉಪ ಪ್ರಶ್ನೆಕೇಳಲು ಅವಕಾಶ ಕೋಡಿ.

ಶ್ರೀ ಜೆ. ಸಿ. ಮಾಧುಸ್ವಾಮಿ:- ಈ ವಿಚಾರ ಹಿಂದೆ ರೂಲ್ 68ರ ಕೆಳಗೆ ಚರ್ಚೆ ಆಗಿದೆ.

ಅಧ್ಯಕ್ಷರು:- ಹಾಗಾದರೆ ಆಯಿತು ಬಿಡಿ.

ಶ್ರೀ ಜೆ. ಸಿ. ಮಾಧುಸ್ವಾಮಿ:- ಚರ್ಚೆ ಆದರೂ ಕೂಡ ಸರ್ಕಾರ ಏನೂ ಕಾರ್ಯಕ್ರಮ ಹಾಕಿಕೊಂಡಿಲ್ಲ, ರೇಷ್ಮೆ ಗಂಟುರೋಗ ನಿವಾರಣೆ ಬಗ್ಗೆ ಒಂದು ಗಂಟೆ ಚರ್ಚೆ ಆಗಿದೆ. ಆದರೆ ನಿವಾರಣೆ ಆಗಿಲ್ಲ.

ಪ್ರೊ: ಎಂ. ಡಿ. ನಂಜುಂಡಸ್ವಾಮಿ:- ಮಾಧುಸ್ವಾಮಿಯವರು ಹೇಳಿದ ಹಾಗೆ ಈ ಬಗ್ಗೆ ನಿಯಮ 68ರಲ್ಲಿ ಚರ್ಚೆಯಾಗಿದ್ದರೂ ಏನೂ ಕ್ರಮ ಗಂಟುರೋಗದ ಬಗ್ಗೆ ಇಲ್ಲ. ಹಿಂದೆ ಫ್ರಾನ್ಸ್ ಮತ್ತು ಇಟಲಿ ದೇಶದಲ್ಲಿ ರೇಷ್ಮೆಗೆ ಈ ರೋಗ ಬಂದು ಪೂರ್ಣ ನಾಶವಾಯಿತು. ಆಗ ಅಲ್ಲಿ ದ್ರಾಕ್ಷಿ ಬೆಳೆಯುವುದಕ್ಕೆ ಪ್ರಾರಂಭ ಮಾಡಿದರು. ಈಗ ಅವರು ಏನುಮಾಡಲಿಲ್ಲ ಎನ್ನುವುದಕ್ಕೆ ಏನು ಹೇಳುತ್ತಾರೆ? ಮತ್ತೆ ಆ ಕಾರಣದಿಂದ ನಾವೇನು ಮಾಡುತ್ತಿದ್ದೇವೆ ನ್ನುವುದನ್ನು ನಾನು ಹೇಳಬೇಕು. ಈ ಇಲಾಖೆಯಲ್ಲಿನ ಅಧಿಕಾರಿಗಳಲ್ಲಿ ಕೆಳಮಟ್ಟದ ಅಧಿಕಾತಿಗಳಿಗೆ ಗೊತ್ತಿಲ್ಲ, that it is trans-ovarial disease.

ತಾಯಿ ಚಿಟ್ಟೆಯಿಂದ ಬರುವ ಒಂದು ಕಾಯಿಲೆ. This pebrin pores are found in the overies of the female. ನಾನೂರು ಚಿಟ್ಟೆ ಪರೀಕ್ಷಕರು ಹಿಂದೆ ಇದ್ದರು. ಅವರಿಗೆ ಏನೋ ಪ್ರಮೋಷನ್ ಕೊಟ್ಟಿದ್ದಾರೆ. ಈಗ ಅವರು ಚಿಟ್ಟೆ ಪರೀಕ್ಷೆ ಮಾಡುವುದನ್ನೇ ಬಿಟ್ಟಿದ್ದಾರೆ. Even the layings with the presence of pebrin pores, are released to the market with the result that sericulture is totally destroyed in Karnataka. ಆ ಕಾರಣದಿಂದ ಈ ರೀತಿ ತಾವು ಕೆಲಸ ಮಾಡಿದರೆ ಅದು ಸಾಧ್ಯವಿಲ್ಲ. ಈಗ ನಾವೇನು ಮಾಡುತ್ತಿದ್ದೇವೆಂದರೆ We have even conducted a State level seminar and asked the Government to change your licencing policy. ನನ್ನ ಜಿಲ್ಲೆಗೆ ಮೊಟ್ಟೆಯನ್ನು ನಾವೇ ತರಿಸಿ ಮಾಡುತ್ತಿದ್ದೇವೆ. With hundred percent success, hundred percent disease-free layings ಇದನ್ನಾದರೂ ಮಾಡಿ ಇಲ್ಲ ತಕ್ಷಣ ಚಿಟ್ಟೆ ಪರೀಕ್ಷಕರನ್ನು ನೇಮಕಮಾಡಿ. ಚಿಟ್ಟೆ ಪರೀಕ್ಷಕರು ಯಂತ್ರದಿಂದ ಚಿಟ್ಟೆ ಪರೀಕ್ಷೆ ಮಾಡಬೇಕು. ನಮ್ಮಲ್ಲಿ ಮೈಕ್ರಾಸ್ಕೋಪ್‌ಗಳೇ ಇಲ್ಲ. ಮೈಕ್ರಾಸ್ಕೋಪ್‌ಗಳು ಇದ್ದರೂ ಅವುಗಳಿಗೆ ಎರಡೂ ಕಡೆ ಲೆನ್ಸ್ ಇಲ್ಲ. ಇಂತಹದ್ದನ್ನು ಇಟ್ಟುಕೊಂಡು ಕೆಲಸಮಾಡುತ್ತಿದ್ದಾರೆ. ಇದು ಹುಡುಗಾಟದ ಪ್ರಶ್ನೆಯಲ್ಲ. ಏಕೆಂದರೆ ಸಿರಿಕಲ್ಚರ್‌ನಿಂದ ರಾಜ್ಯದಲ್ಲಿ ಬಹಳ ದೊಡ್ಡ ಸಂಖ್ಯೆಯಲ್ಲಿ ರೈತರು ಬದುಕುತ್ತಿದ್ದಾರೆ. ಆದ್ದರಿಂದ ಇದನ್ನು ಗಮನಕ್ಕೆ ತೆಗೆದುಕೊಳ್ಳಬೇಕು.

ಶ್ರೀ ವಿ. ಮುನಿಯಪ್ಪ:_ ಸನ್ಮಾನ್ಯ ಅಧ್ಯಕ್ಷರೇ ಗಂಟುರೋಗದ ಬಗ್ಗೆ ಸನ್ಮಾನ್ಯ ಸದಸ್ಯರೂ ಹಿರಿಯರೂ ಆದ ಪ್ರೊಫೆಸರ್ ನಂಜುಂಡಸ್ವಾಮಿಯವರು ಏನು ಹೇಳಿದ್ದಾರೆ ಅದನ್ನು ವಾಸ್ತವಿಕವಾಗಿ ನಾನಂತೂ ಒಪ್ಪುವುದಕ್ಕೆ ಸಾಧ್ಯವಿಲ್ಲ. ಇಲಾಖೆಯಲ್ಲಿ ಒಳ್ಳೆಯ ತರಬೇತಿಯನ್ನು ಕೊಟ್ಟಿರತಕ್ಕ ಮೋಸ್ಟ್ ಟೆಸ್ಟರ್‌ಗಳನ್ನು ಅಪಾಯಿಂಟ್‌ಮೆಂಟ್ ಮಾಡಿದ್ದೇವೆ.

ಅದಕ್ಕೆ ಬೇಕಾದ ಮೇಲಿನಾಧಿಕಾರಿಗಳ ಉಸ್ತುವಾರಿಯಲ್ಲಿ ವಿಶೇಷ ದಳಗಳನ್ನು ರಚನೆ ಮಾಡಿ ಸುಮಾರು ಆರು ತಿಂಗಳಿಂದ ನಾವು ವಿಶೇಷ ಅಧಿಕಾರಿಗಳನ್ನು ನೇಮಕ ಮಾಡಿದ್ದೇವೆ. ಯಾರಿಗೆ ಈ ಇಲಾಖೆಯಲ್ಲಿ ಹೆಚ್ಚಿನ ಒಂದು ಅನುಭವವಿದೆ, ಯಾರಿಗೆ ಹೆಚ್ಚಿನ ಆಸ್ತಕಿಯಿದೆ ಅಂತಹ ಅಧಿಕಾರಿಗಳನ್ನು ವಿಶೇಷವಾಗಿ ಬಿತ್ತನೆ ಪ್ರದೇಶಗಳಿಗೆ ನಾವು ನೇಮಕ ಮಾಡಿ ಮೇಲಿನಧಿಕಾರಿಗಳ ಉಸ್ತುವಾರಿಯಲ್ಲಿ ಈ ರೋಗವನ್ನು ತಡೆಗಟ್ಟಲಕ್ಕ ಕೆಲಸವನ್ನು ತಾವು ಬಹಳ ಪರಿಣಾಮಕಾರಿಯಾದ ರೀತಿಯಲ್ಲಿ ಮಾಡುತ್ತಿದ್ದೇವೆ. ಆ ರೋಗ ಈಗ ಒಂದು ಹಂತದಲ್ಲಿದೆ. ಆದರೆ ನಾವು ಏನೊಂದು ಮಾತು ಹೇಳಿದ್ದೀರಿ ಮೈಕ್ರಾಸ್ಕೋಪ್‌ಗಳಿಗೆ ಲೆನ್ಸ್ ಇಲ್ಲವೆಂದು ಹೇಳತಕ್ಕದ್ದು ಸರಿಯಲ್ಲ. ತಾವು ನನ್ನ ಜೊತೆಯಲ್ಲಿ ಬನ್ನಿ ನಾನು ಬರುತ್ತೇನೆ, ಪ್ರತಿಯೊಂದು ನಮ್ಮ ಗ್ರೆನೇಜುಗಳಿಗೆ ಹೋಗೋಣ, ಪ್ರತಿಯೊಂದು ಮೈಕ್ರಾಸ್ಕೊಪ್‌ಗಳನ್ನು ತಾವೇ ಚೆಕ್‌ಮಾಡಿ. ನಾನು ಸಹ ಅನೇಕ ಗ್ರೆನೇಜುಗಳಿಗೆ ಭೇಟಿಕೊಟ್ಟು ಚೆಕ್ ಮಾಡಿದ್ದೇನೆ. ಪೋರ್ಸ್ ಯಾವರೀತಿ ಬರುತ್ತದೆ ಡಿಟೆಕ್ಟ್ ಮಾಡುವುದಕ್ಕೆ ಈ ವಿಚಾರದ ಬಗ್ಗೆ ಸಂಬಂಧಪಟ್ಟ ತಜ್ಞರ ಜೊತೆಯಲ್ಲಿ ವಿಚಾರ ಮಾಡಿದ್ದೇನೆ. ತಾವು ಹೇಳಿದಷ್ಟು ನಿರ್ಲಕ್ಷತನವಿಲ್ಲವೆನ್ನುವ ಮಾತನ್ನು ಖಂಡಿತಾ ವಿಷಾದದಿಂದ ಹೇಳಬೇಕಾಗಿದೆ.

ಶ್ರೀ ಸಿ. ಎಂ. ಲಿಂಗಪ್ಪ:- ಮಾನ್ಯ ಅಧ್ಯಕ್ಷರೇ, ನಾನು ಕೇಳಿರತಕ್ಕ ಎರಡು ಪ್ರಶ್ನೆಗಳಿಗೆ ನೇರವಾದ ಉತ್ತರವಿಲ್ಲ. ತಮ್ಮ ಗಮನಕ್ಕೆ ತರುವುದಾದರೆ ನನ್ನ ಪ್ರಶ್ನೆ ಏನೆಂದರೆ ಒಂದು ವರ್ಷದಿಂದ ರೇಷ್ಮೆ ಬೆಳೆಗಾರರನ್ನು ಕಾಡುತ್ತಿರುವ ಗಂಟುರೋಗದಿಂದ ರೇಷ್ಮೆ ಬೆಳೆಗಾರರಿಗೆ ಎಷ್ಟು ಕೋಟಿ ರೂಪಾಯಿ ನಷ್ಟ ಸಂಭವಿಸಿದೆ ಎನ್ನುವುದು ಸರ್ಕಾರದ ಗಮನಕ್ಕೆ ಬಂದಿದೆ. ಅಂದರೆ ಅದಕ್ಕೆ ಉತ್ತರ ಹೇಳುತ್ತಾರೆ ಗಂಟುರೋಗವೂ ಸೇರಿದಂತೆ ರೇಷ್ಮೆ ಹುಳುಗಳಿಗೆ ಬರತಕ್ಕ ಸುಣ್ಣಕಟ್ಟುರೋಗ, ಹಾಲುರೋಗ ಮತ್ತು ಸಪ್ಪೆರೋಗಗಳಿಂದ ಬೆಳೆಗಳು ಕಿಟ್ಟಿವೆ. ರೇಷ್ಮೆ ಬೆಳೆ ಕೆಡಲು ಅನೇಕ ಕಾರಣಗಳಿವೆ. ವೈಜ್ಞಾನಿಕ ರೀತಿಯಲ್ಲಿ ಹುಳು ಸಾಕಾಣೆ ಮಾಡದಿರುವುದರಿಂದ ವೈಫಲ್ಯತೆಗಳು ರೇಷ್ಮೆ ಹುಳುಗಳಿಗೆ ಬರತಕ್ಕ ರೋಗಗಳೆಂದು ಉತ್ತರ ಕೊಡುತ್ತಾರೆ. ನಾನು ಮೊತ್ತವನ್ನು ಕೇಳಿದ್ದೆ. ನಮ್ಮ ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಒಂದು ವರ್ಷದಿಂದ ಸುಮಾರು ಕನಿಷ್ಟ 50 ಕೋಟಿ ರೂಪಾಯಿ ಬೆಲೆಬಾಳತಕ್ಕ ರೇಷ್ಮೆ ಗೂಡು ಹಾಳಾಗಿ ಹೋಗಿದೆ. ಇನ್ನು ಸಚಿವರ ಜಿಲ್ಲೆಯಲ್ಲಿ ಇತರೆ ಅನೇಕ ಜಿಲ್ಲೆಗಳಲ್ಲಿ ಎಷ್ಟು ಬೆಳೆ ಹಾಳಾಗಿ ಹೋಗಿದೆ ಎನ್ನುವ ಬಗ್ಗೆ ತಾವು ಅಂದಾಜು ಮಾಡಿ ಉತ್ತರವನ್ನು ತರಿಸಬೇಕಾಗಿತ್ತು. ಆದಕ್ಕೆ ಬದಲಾಗಿ ಬೇರೆ ಉತ್ತರವನ್ನು ಕೊಟ್ಟಿದ್ದಾರೆ. ನನ್ನ ಎರಡನೆಯ ಪ್ರಶ್ನೆ ಏನೆಂದರೆ ಈ ಗಂಟು ರೋಗವನ್ನು ತಡೆಗಟ್ಟದಿದ್ದರೆ ರೇಷ್ಮೆ ಬೆಳೆ ಈ ರಾಜ್ಯದಿಂದ ಮಾಯವಾಗುತ್ತದೆನ್ನುವ ಸತ್ಯಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ? ಅಂದಾಗ ಹೇಳುತ್ತಾರೆ ಗಂಟುರೋಗದ ತೀವ್ರತೆಯನ್ನು ಸರ್ಕಾರ ಮನಗಂಡಿದೆ. ಉತ್ತರ ಸರಿ ಇದೆಯೋ ಇಲ್ಲವೋ ತಾವು ತೀರ್ಮಾನ ಮಾಡಬೇಕು. ಮತ್ತೆ ಇನ್ನೊಂದು ಪ್ರಶ್ನೆಯನ್ನು ನಾನು ಕೇಳಿದ್ದೇನೆ. ಈ ಬೆಳೆಯನ್ನು ಬೆಳೆದು ಹುಳ ಹಣ್ಣಾಗುವ ಸ್ಥಿತಿ ಮುಟ್ಟುವ ಕಾಲಕ್ಕೆ ಇಡೀ ಬೆಳೆ ನಾಶವಾಗುತ್ತದೆ. ಆದಕ್ಕೆ ಬೆಳೆಗಾರರಿಗೆ ಆಗಿರತಕ್ಕಂಥ ಮಿನಿಮಮ್ ಎಕ್ಸಪೆಂಡಿಚರ್, ಅವನಿಗೆ ಸ್ವಂತ ತೋಟ ಇದೆ, ಸೊಪ್ಪಿಗೆ ದುಡ್ಡು ಕೊಡುವುದು ಬೇಡ, ಅವನ ಮೊಟ್ಟೆಗೆ, ಗೊಬ್ಬರಕ್ಕೆ, ಕೂಲಿ ಕೆಲಸಕ್ಕೆ, ಮನೆಮಂದಿಯೆಲ್ಲ ಕಷ್ಟಪಟ್ಟಿದ್ದಕ್ಕೆ, ಬಳೆ ನಷ್ಟಮಾಡಿಕೊಂಡಿರುವ ರೈತನಿಗೆ ಏನಾದರೂ ಪರಿಹಾರ ಕೊಡಿ ಎಂದು ಕೇಳಿದರೆ ಅದಕ್ಕೆ ಅವಕಾಶ ಇಲ್ಲವೆಂದು ಹೇಳುತ್ತೀರಿ. ಇವತ್ತಿಗೆ ಕಾನೂನಿನಲ್ಲಿ ಅವಕಾಶ ಇಲ್ಲದಿದ್ದರೆ ಚಿಂತೆ ಇಲ್ಲ. ಮಾನ್ಯ ಸಚಿವರು ಸ್ವತಃ ರೇಷ್ಮೆ ಬೆಳೆಗಾರರು ಆದ್ದರಿಂದ ಇದಕ್ಕೆ ಏನಾದರೂ ಒಂದು ಪರ್ಯಾಯ ವ್ಯವಸ್ಥೆ ಮಾಡಿ ಏಕೆಂದರೆ ಪ್ರೈಸ್ ಸ್ಟೆಬಿಲೈಸೇಶನ್ ಫಂಡ್ ಅಂತ ಹೇಳಿ ಇವತ್ತು ಮಾರುಕಟ್ಟೆಯಲ್ಲಿ ಫಂಡ್ ವಸೂಲು ಮಾಡಿ ಇಡುತ್ತಿದ್ದಾರೆ. ಹಾಗೆ ರೈತರಿಗೆ, ಈ ರೇಷ್ಮೆ ಬೆಳೆಗಾರರಿಗೆ ಪರಿಹಾರ ಕೊಡುವ ದೃಷ್ಟಿಯಿಂದ ಏನಾದರೂ ಒಂದು ಸುಧಾರಣೆಯನ್ನು ತರುವುದಕ್ಕೆ ತಾವು ಆಲೋಚನೆ ಮಾಡಿದ್ದೀರಾ?

ಶ್ರೀ ವಿ. ಮುನಿಯಪ್ಪ:- ಸನ್ಮಾನ್ಯ ಸದಸ್ಯರು ಗಂಟುರೋಗದಿಂದ ಆಗಿರತಕ್ಕಂಥ ನಷ್ಟ ಎಂದು ಕೇಳಿದ್ದಾರೆ. ಆದರೆ ಇದು ಬರತಕ್ಕಂಥ ಬೆಳೆಗೆ ಬರೀ ಗಂಟುರೋಗದಿಂದ ಇಷ್ಟು ನಷ್ಟವಾಗಿದೆಯೆಂದು ನಿಗದಿತವಾಗಿ ಹೇಳುವುದಕ್ಕೆ ಸಾಧ್ಯವಿಲ್ಲ. ಆದಕ್ಕೆ ನಾನಾ ತರಹದ ರೋಗಗಳು ಇವೆ. ಒಟ್ಟಾರೆಯಾಗಿ ಅಂಕಿ ಅಂಶಗಳನ್ನು ಕೊಡುವುದಕ್ಕೆ ಸಾಧ್ಯವಿದೆ. ಈಗ ಸುಮಾರು 91-92ರ ಸಾಲಿಗೆ 43 ಸಾವಿರದ 733 ಟನ್ ಗುರಿ ಇಟ್ಟಿದ್ದರು. ಅದರಲ್ಲಿ ನಾವು 90-91ಕ್ಕೆ ಹಿಂದಿನ ವರ್ಷಕ್ಕೆ ಹೋಲಿಸಿದಾಗ 42,598 ಟನ್ ಹೆಚ್ಚುವರಿ ಉತ್ಪಾದನೆಯನ್ನು ಹೋದವರ್ಷ ಮಾಡಿದ್ದೇವೆ. ಅದಕ್ಕೆ ಈ ಬಾರಿ ಜನವರಿ 31ಕ್ಕೆ 3,879 ಟನ್ ನಮಗೆ ಕಡಿಮೆಯಾಗಿದೆ. ಆದರೆ ಒಟ್ಟಾರೆ ಅದನ್ನು ಆವರೇಜ್ ರೇಟನ್ನು ಕ್ಯಾಲ್ಕುಲೇಟ್ ಮಾಡಿದಾಗ ಸುಮಾರು ಐದು ಕೋಟಿ ಆಗಬಹುದು ಎಂದು ಒಂದು ಅಂದಾಜು ನಮ್ಮ ಇಲಾಖೆಯಲ್ಲಿರತಕ್ಕಂಥ ಅಂಕಿ ಅಂಶಗಳ ಪ್ರಕಾರ ಸಿಗುತ್ತದೆ. ಆದರೆ ನಿಗದಿತವಾಗಿ ಇಂಥಾದ್ದೇ ಬೆಳೆ ಗಂಟುರೋಗದಿಂದ

ಸಪ್ಪೆರೋಗದಿಂದ ಹೋಗಿದೆ ಎನ್ನುವ ಅಂಕಿ ಅಂಶ ತೆಗೆಸುವುದು ಸ್ವಲ್ಪ ಕಷ್ಟವಾಗುತ್ತದೆ. ಆಮೇಲೆ ಸನ್ಮಾನ್ಯ ಸದಸ್ಯರು ಗಂಟುರೋಗದಿಂದ ಅಥವಾ ಇತರೆ ಯಾವುದೇ ರೋಗದಿಂದ ಬೆಳೆ ನಷ್ಟವಾಗಿರುವ ಬಗ್ಗೆ ಸರ್ಕಾರದ ಸಹಾಯಧನ ಕೊಡುವ ಬಗ್ಗೆ ವಿಚಾರ ಪ್ರಸ್ತಾಪ ಮಾಡಿದ್ದಾರೆ. ಆದರೆ ಈ ತರಹ ರೋಗಗಳಿಗೆ ಪರಿಹಾರ ಕೊಡುತ್ತಾ ಹೋದರೆ, ಬಹುಶಃ ಈ ರೋಗ ಬರುವುದಕ್ಕೆ ಉತ್ತೇಜನ ಕೊಟ್ಟ ಹಾಗೆ ಆಗುತ್ತದೆ. ಈ ರೋಗವನ್ನು ತಡೆಗಟ್ಟುವಂಥ ಕೆಲಸಕ್ಕೆ ಈ ಸಾರಿ ವಿಶೇಷವಾದಂಥ ಯೋಜನೆಯನ್ನು ನಬಾರ್ಡಗೆ ನಿರೂಪಣೆ ಮಾಡಿ ಕಳಿಸಿಕೊಟ್ಟಿದೆ. ಇದರ ಉದ್ದೇಶ ಏನೆಂದರೆ ಪ್ರತಿಯೊಬ್ಬ ರೈತನಿಗೆ ರೇಷ್ಮೆಹುಳ ಸಾಕಾಣಿಗೆ ಮನೆ ಇದ್ದೇ ಇರಬೇಕು. ರೋಗ ನಿಯಂತ್ರಣ ಮಾಡುವುದಕ್ಕೆ ಬೇಕಾದಂಥ ಕನಿಷ್ಟ ಸಾಮಗ್ರಿಗಳು ಅವನಿಗೆ ಪ್ರತ್ಯೇಕವಾಗಿ ಇರಬೇಕೆಂದು ಗುರಿಯನ್ನು ಇಟ್ಟುಕೊಂಡು ಅದಕ್ಕೆ ಸಾಲದ ಯೋಜನೆಯನ್ನು ಮಾಡಿ ನಬಾರ್ಡಿಗೆ ಕಳಿಸಿಕೊಟ್ಟಿದ್ದೇವೆ. ಅದಕ್ಕೆ ಮಂಜೂರಾತಿ ಬಂದನಂತರ ಪ್ರೈಸ್ ಸ್ಟೆಬಿಲೈಸೇಶನ್ ಫಂಡ್ ಏನಿದೆ, ಅದರಿಂದ ಸುಮಾರು 15 ಪರ್ಸೆಂಟ್ ಸಬ್ಸಿಡಿ ಅಥವಾ ಪ್ರೋತ್ಸಾಹಧನ ಕೊಟ್ಟು ಪ್ರತ್ಯೇಕವಾದ ರೇಷ್ಮೆ ಹುಳ ಸಾಕಾಣಿಕೆಗೆ ಮನೆ ಕೊಡುವುದಕ್ಕೆ ಮುಂದೆ ಬರತಕ್ಕಂಥ ಯೋಜನೆಯನ್ನು ನಿರೂಪಣೆ ಮಾಡುತ್ತೇವೆ.

SRI M. RAJASHEKARAMUTHY:- Since the old seed area is affected by pebrin disease and since the eradication of the disease has become difficult, will the Government consider the question of organising an alternative seed area?

ಶ್ರೀ ವಿ. ಮುನಿಯಪ್ಪ:- ಸನ್ಮಾನ್ಯ ಅಧ್ಯಕ್ಷರೇ, ಇದು ಸ್ವಲ್ಪ ಸೂಕ್ಷ್ಮವಾದ ವಿಚಾರ. ಈಗ ಬಿತ್ತನೆ ಪ್ರದೇಶ ವಲಯವನ್ನು ಡಿಕ್ಲೇರ್ ಮಾಡಿದ್ದೇವೆ. ಆ ಪ್ರದೇಶದಲ್ಲಿರತಕ್ಕಂಥ ರೈತರು ಬಿತ್ತನೆ, ಬೆಳೆಯಲಿಕ್ಕೆ ಅವಲಂಬಿಸಿದ್ದಾರೆ. ಬಿತ್ತನೆ ಕಾನ್ಸೆಪ್ಟ್ ಮೇಯಂಟೇನ್ ಮಾಡುವುದಕ್ಕೆ ಟ್ರೈನ್‌ಅಪ್ ಆಗಿದ್ದಾರೆ. ಬೇರೆ ಒಂದು ಬಿತ್ತನೆ ಪ್ರದೇಶವನ್ನು ಮಾಡಬೇಕಾದರೆ ಆ ಪ್ರದೇಶದಲ್ಲಿರತಕ್ಕಂಥ ಹಾಲಿ ಇರತಕ್ಕಂಥ ಸಿ.ಬಿ. ರೇರಿಂಗ್ ಏನಿದೆ ಅದನ್ನು ತೆಗೆಯಬೇಕು ಮತ್ತೆ ಅವರಿಗೆ ಮೂಲ ಬಿತ್ತನೆಗೆ ತಳಿಗಳನ್ನು ಸಾಕುವುದಕ್ಕೆ ವೈಜ್ಞಾನಿಕ ತರಬೇತಿಯನ್ನು ಕೊಡಬೇಕು. ಆದ್ದರಿಂದ ಇದಕ್ಕೆ ಅದರದ್ದೇ ಆದ ತಾಂತ್ರಿಕವಾದ ಕಷ್ಟ ಇದೆ. ಆದರೆ ಸರ್ಕಾರ ಇದರ ಬಗ್ಗೆ ಯೋಚನೆ ಮಾಡುತ್ತದೆ.

ಹೈದರಾಬಾದ್ ಕರ್ನಾಟಕ ಜಿಲ್ಲೆಗಳಲ್ಲಿ ಕೈಗಾರಿಕೆಗಳ ಸ್ಥಾಪನೆ

94 (491) ಶ್ರೀ ಬಾಬುರಾವ್ ಚವ್ಹಾಣ್ (ಶಹಾಬಾದ್):- ಮಾನ್ಯ ಬಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ;

ಅ) ಹೈದ್ರಾಬಾದ್ ಕರ್ನಾಟಕ ಜಿಲ್ಲೆಗಳಲ್ಲಿ ಮಧ್ಯಮ ಹಾಗೂ ಭಾರಿ ಪ್ರಮಾಣದ ಕೈಗಾರಿಕೆ ತೆರೆಯಲು ರಾಜ್ಯ ಸರ್ಕಾರವು ಯೋಜನೆ ಮಾಡುತ್ತಿದೆಯೇ?

ಆ) ಹಾಗಿದ್ದಲ್ಲಿ ಆ ಕೈಗಾರಿಕೆಗಳು ಯಾವುವು?

ಇ) ಖಾಸಗಿ ಉದ್ದಿಮೆದಾರರು ಬಹಳಷ್ಟು ಪ್ರಮಾಣದಲ್ಲಿ ಸಿಮೆಂಟ್ ಕಾರ್ಖಾನೆ ತೆರೆಯುತ್ತಿರುವುದರಿಂದ ಸರ್ಕಾರದ ಕಡೆಯಿಂದ ಏಕೆ ಸಿಮೆಂಟ್ ಕಾರ್ಖಾನೆ ಹೈದ್ರಾಬಾದ್-ಕರ್ನಾಟಕ ಭಾಗದಲ್ಲಿ ತೆಗೆಯಲಾರರು?

ಈ) ಈ ವಿಷಯದಲ್ಲಿ ಸರ್ಕಾರದ ನಿಲುವು ಏನು?

ಶ್ರೀಮತಿ ಮನೋರಮ ಮಧ್ವರಾಜ್ (ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು.):-

ಅ) ರಾಜ್ಯ ಸರ್ಕಾರದ ವತಿಯಿಂದ ಸರ್ಕಾರಿ ವಲಯದ ಕೈಗಾರಿಕೆಯನ್ನು ಸ್ಥಾಪಿಸುವ ಯಾವುದೇ ಯೋಜನೆ ಇರುವುದಿಲ್ಲ

ಆ) ಅನ್ವಯಿಸುವುದಿಲ್ಲ.

ಇ) " ಅ " ನಲ್ಲಿ ತಿಳಿಸಿರುವಂತೆ ಸರ್ಕಾರದ ವತಿಯಿಂದ ಯಾವುದೇ ವಿಧವಾದ ಕೈಗಾರಿಕೆಯನ್ನು ಸ್ಥಾಪಿಸುವ ಯೋಜನೆ ಇರುವುದಿಲ್ಲ. ಆ ಖಾಸಗಿ ಕಾರ್ಖಾನೆ ತೆರೆಯಲು ಮುಂದು ಬಂದಲ್ಲಿ ಅವರಿಗೆ ಕೈಗಾರಿಕಾ ಇಲಾಖೆಯ ವತಿಯಿಂದ ಎಲ್ಲಾ ವಿಧವಾದ ಸಹಾಯ ನೀಡಲಾಗುವುದು.